Building Certificate

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

(ಐ.ಎಸ್.ಓ.9001–2008 ಮಾನ್ಯತೆ ಪಡೆದ ಅಧಿಕೃತ ಸಂಸ್ಥೆ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ,ಇಲಾಖೆ ವಿಭಾಗ, ರಾಯಚೂರು.

ಸಂ.ಲೋಇ/ರಾವಿರಾ/ಎಸ್.ಟಿ.ಎಸ್./2023–24/ 769 ದಿನಾಂಕ: 4-7-2023

ಪ್ರಾಂಶುಪಾಲರು,
ಕೇಂದ್ರೀಯ ವಿದ್ಯಾಲಯ,
ರಾಯಚೂರು – ಇವರಿಗೆ

ಮಾನ್ಯರೇ,

ವಿಷಯ:– ಶಾಲಾ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ:–1. ಸರ್ಕಾರದ ಅಪರ ಕಾರ್ಯಧರ್ಶಿಗಳು ಲೋಕೋಪಯೋಗಿ ಇಲಾಖೆ ಬೆಂಗಳೂರು ರವರ ಪತ್ರ ಸಂಖ್ಯೆ: ಲೋಇ59ಬಿಇಡಿ2019 ದಿನಾಂಕ: 06–05–2022

2. ಪ್ರಾಂಶುಪಾಲರು ಕೇಂದ್ರೀಯ ವಿದ್ಯಾಲಯ ರಾಯಚೂರು ಇವರ ಅರ್ಜಿ ದಿನಾಂಕ:15–06–2023.

3. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ–ವಿಭಾಗ ರಾಯಚೂರು ರವರ ಪತ್ರ ಸಂ: 265 ದಿನಾಂಕ: 30–06–2023.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಖಾಸಗಿ ಅನುದಾನಿತ, ಅನುದಾನ ರಹಿತ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಸಂಭಂದ ಪಟ್ಟ ಕಟ್ಟಡಗಳಿಗೆ ಸ್ಟ್ರಕ್ಚರಲ್ ಸ್ಟೆಬಿಲಿಟಿ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನೀಡಲು ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುತ್ತಾರೆ. ಮುಂದುವರೆದು ಪ್ರಾಂಶುಪಾಲರು ಕೇಂದ್ರೀಯ ವಿದ್ಯಾಲಯ ರಾಯಚೂರು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಉಲ್ಲೇಖ ಪತ್ರ (2)ರ ಮುಖಾಂತರ ಕೋರಿರುತ್ತಾರೆ.

ಉಲ್ಲೇಖ (3)ರನ್ವಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ–ವಿಭಾಗ ರಾಯಚೂರು ರವರು ದಿನಾಂಕ: 30–06–2023 ರಂದು ಪ್ರಾಂಶುಪಾಲರ ಉಪಸ್ಥಿತಿಯಲ್ಲಿ ಪರಿವೀಕ್ಷಣೆ ಕೈಗೊಂಡು, ಸದರಿ ವಿದ್ಯಾಲಯವು ನೆಲ ಮತ್ತು ಮೊದಲನೆಯ ಮಹಡಿ ಕಟ್ಟಡವಾಗಿರುತ್ತದೆ. ಆರ್.ಸಿ.ಸಿ ಛಾವಣಿಯ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡಗಳು ಇಟ್ಟಿಗೆ ಗೋಡೆಗಳಿಂದ ನಿರ್ಮಿಸಲಾಗಿದ್ದು, ಕಾಲಂಗಳಿಂದ ಕೂಡಿರುತ್ತದೆ. ಕಟ್ಟಡದ ಕಿಟಕಿ, ವೆಂಟಿಲೇಟರ್‌ಗಳು ಮತ್ತು ಬಾಗಿಲುಗಳು ಮೇಲ್ನೋಟಕ್ಕೆ ಸುಭದ್ರವಾಗಿದೆ.

ಮೇಲ್ಕಂಡ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ–ವಿಭಾಗ ರಾಯಚೂರು ರವರ ದೃಢೀಕರಣದೊಂದಿಗೆ ವರದಿ ಸಲ್ಲಿಸಿರುತ್ತಾರೆ, ಅದರಂತೆ ಈ ಕಛೇರಿಯಿಂದ ಶಾಲಾ ಕಟ್ಟಡವು ಸುರಕ್ಷಿತವಾಗಿದೆ ಎಂದು ದೃಢೀಕರಿಸಿದೆ.

ಸದರಿ ದೃಢೀಕರಣ ಪತ್ರವು ಒಂದು ವರ್ಷ ಅವಧಿಗೆ ಮಾತ್ರ ಸಿಂಧುವಾಗಿರುತ್ತದೆ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.

प्राचार्य/Principal
केन्द्रीय विद्यालय/Kendriya Vidyalaya
रायचूर ५८४१०१ Raichur 584101
कर्नाटक राज्य Karnataka State